10

# ಯೇಸುವಿನ ಸಭೆ: ಆರಾಧನೆ

# (2)

ಹಿಂದಿನ ಪಾಠದಲ್ಲಿ ಹೆಚ್ಚಾಗಿ ಆರಾಧನೆಯ ನಾಲ್ಕು ವ್ಯಕ್ತಪಡಿಸುವಿಕೆಯ ಮೇಲೆ ಕೇಂದ್ರೀಕರಿಸಲಾಗಿತ್ತು: ಕರ್ತನ ಭೋಜನ, ದೇವರ ವಾಕ್ಯದ ಬೋಧನೆ ಮತ್ತು ಪ್ರಸಂಗ, ಪ್ರಾರ್ಥನೆ ಹಾಗೂ ಕೊಡುವಿಕೆ. ಈ ಪಾಠದಲ್ಲಿ ಐದನೆಯ ವ್ಯಕ್ತಪಡಿಸುವಿಕೆಯನ್ನು - ಹಾಡುವಿಕೆಯನ್ನು - ಹೆಚ್ಚು ವಿವರವಾಗಿ ಚರ್ಚಿಸುವೆವು.

ಹಾಡುವಿಕೆಯು ಯಾವಾಗಲೂ ಆರಾಧನೆಯ ನೈಸರ್ಗಿಕವಾದ ವ್ಯಕ್ತಪಡಿಸುವಿಕೆಯಾಗಿತ್ತು. ಹಳೇ ಒಡಂಬಡಿಕೆಯಲ್ಲಿ ದಾವೀದನು, “ಆತನನ್ನು ಹಾಡುತ್ತಾ ವಾದ್ಯ ಬಾರಿಸುವೆನು” (ಕೀರ್ತನೆ 27:6ಸಿ) ಎಂದು ಹೇಳಿದ್ದಾನೆ. ಹೊಸ ಒಡಂಬಡಿಕೆಯಲ್ಲಿ ಹಾಡುವಿಕೆಯು ಆರಾಧನೆಯ ಅಗತ್ಯವಾದ ವ್ಯಕ್ತಪಡಿಸುವಿಕೆಯಾಗಿತ್ತು.

ಹಾಡುವಿಕೆಯು ನಮ್ಮ ಸ್ವಂತ ಧ್ಯಾನಗಳಲ್ಲಿಯೂ ಒಳಗೊಳ್ಳಬೇಕು. “ನಿಮ್ಮಲ್ಲಿ ಸಂತೋಷ ಪಡುವವನಿದ್ದಾನೋ? ಅವನು ಕೀರ್ತನೆ ಹಾಡಲಿ” (ಯಾಕೋಬ 5:13ಬಿ) ಎಂದು ಯಾಕೋಬನು ಬರೆದಿದ್ದಾನೆ. ನಮ್ಮಲ್ಲಿ ಕೆಲವರು ತಂದೆ ತಾಯಿಗಳೂ ಇಲ್ಲವೇ ಅಜ್ಜ ಅಜ್ಜಿಯರು ಕೆಲಸ ಮಾಡುವಾಗ ಹಾಡುತ್ತಿದುದ್ದನ್ನು ಜ್ಞಾಪಿಸಿಕೊಳ್ಳುತ್ತೇವೆ.

ಹಾಡುವಿಕೆಯು ನಮ್ಮ ಬಹಿರಂಗ ಆರಾಧನೆಯ ಭಾಗವಾಗಿರಬೇಕೆಂದು ದೇವರು ಅಪ್ಪಣೆ ಮಾಡಿದ್ದಾನೆ. “ಸಭಾಮಧ್ಯದಲ್ಲಿ ನಿನಗೆ ಸ್ತುತಿಪದಗಳನ್ನು ಹಾಡುವೆನು”[1] ಎಂದು ಇಬ್ರಿಯ 2:12ಬಿ ಯಲ್ಲಿ ಹೇಳಿದೆ. “ಒಬ್ಬರಿಗೊಬ್ಬರು ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ” ಮಾತಾಡಿಕೊಳ್ಳಬೇಕೆಂದು ಎಫೆಸದಲ್ಲಿಯ ಕ್ರೈಸ್ತರಿಗೆ ಪೌಲನು ಆಜ್ಞಾಪಿಸಿದ್ದಾನೆ (ಎಫೆಸ 5:19ಎ). “ಕಿರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ” ಒಬ್ಬರಿಗೊಬ್ಬರು ಬೋಧಿಸಿರಿ, ಬುದ್ಧಿವಾದ ಹೇಳಿಕೊಳ್ಳಿರಿ ಎಂದು ಕೊಲೊಸ್ಸೆಯಲ್ಲಿಯ ಸಭೆಗೆ ಹೇಳಿದ್ದಾನೆ (ಕೊಲೊಸ್ಸೆ 3:16). 1 ಕೊರಿಂಥ 14ರಲ್ಲಿ ಪೌಲನು ಬಹಿರಂಗ ಆರಾಧನಾ ಸಭಾ ಕೂಟಕ್ಕೆ ಮಾರ್ಗದರ್ಶನಗಳನ್ನು ಹೇಳುವಾಗ ಕ್ರೈಸ್ತರು “ಆತ್ಮದಿಂದಲೂ ಹಾಡಬೇಕು ಮತ್ತು ಬುದ್ಧಿಯಿಂದಲೂ ಹಾಡಬೇಕು” (1 ಕೊರಿಂಥ 14:15) ಎಂದು ಹೇಳಿದ್ದಾನೆ.

ಈ ಪಾಠದಲ್ಲಿ , ಬಹಿರಂಗ ಆರಾಧನೆಯ ಮೇಲೆ ಪ್ರಾಧಾನ್ಯತೆ ಇರುವುದು. ಇಲ್ಲಿ ಒಳಗೊಂಡಿರುವ ಸೂತ್ರಗಳು ವೈಯಕ್ತಿಕ ಆರಾಧನೆಗೂ ಅನ್ವಯಿಸಲ್ಪಡಬಹುದು.

## ದೇವರು ಬಯಸುವದು ಏನನ್ನು

ಹಾಡುವಿಕೆಯ ಮೇಲೆ ಹೊಸ ಒಡಂಬಡಿಕೆಯ ವಚನಗಳನ್ನು ಪಟ್ಟಿ ಮಾಡುವದರಲ್ಲಿ ಮಾರ್ಕ 14:26 ಒಳಗೊಂಡಿರುವುದು. ಅಲ್ಲಿ ಯೇಸುವು ಮತ್ತು ಆತನ ಶಿಷ್ಯರು ಎಣ್ಣೆಮರಗಳ ಬೆಟ್ಟಕ್ಕೆ ಹೋಗುವ ಮೊದಲು ಸಂಗೀತ ಹಾಡಿದರು.[2] ಅದು ಅಪೊಸ್ತಲರ

ಕೃತ್ಯ 16:25ನ್ನೂ ಒಳಗೊಂಡಿರುವುದು. ಅಲ್ಲಿ ಮಧ್ಯರಾತ್ರಿಯಲ್ಲಿ "ಪೌಲನು ಮತ್ತು ಸೀಲನು ... ದೇವರಿಗೆ ಸ್ತುತಿ ಪದಗಳನ್ನು ಹಾಡುತ್ತಿದ್ದರು." ನಾನು ಮಾಡುವಂತೆ ಯೇಸುವೂ ಆತನ ಅನುಯಾಯಿಗಳೂ ಹಾಡುವದನ್ನು ಪ್ರೀತಿಸಿದರು ಎಂದು ಈ ವಚನಗಳು ಹೇಳುವದರಿಂದ ಅವುಗಳನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಪಟ್ಟಿ ಈಗ ಹೇಳಿದವುಗಳನ್ನೂ ಇತರವುಗಳನ್ನೂ ಒಳಗೊಂಡಿರುತ್ತದೆ.[3]

> ... ಹೀಗೆ ಬರೆದದೆ - ಈ ಕಾರಣದಿಂದ ಅನ್ಯಜನಗಳ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು; ನಿನ್ನ ನಾಮವನ್ನು ಸಂಕೀರ್ತಿಸುವೆನು (ರೋಮಾಪುರ 15:9).
>
> ... ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು (1 ಕೊರಿಂಥ. 14:15).
>
> ... ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು; ಸಭಾಮಧ್ಯದಲ್ಲಿ ನಿನಗೆ ಸ್ತುತಿ ಪದಗಳನ್ನು ಹಾಡುವೆನು (ಇಬ್ರಿಯ 2:12).
>
> ನಿಮ್ಮಲ್ಲಿ ಬಾಧೆಪಡುವವನು ಇದ್ದಾನೋ? ಅವನು ದೇವರನ್ನು ಪ್ರಾರ್ಥಿಸಲಿ. ನಿಮ್ಮಲ್ಲಿ ಸಂತೋಷಪಡುವವನಿದ್ದಾನೋ? ಅವನು ಕೀರ್ತನೆ ಹಾಡಲಿ (ಯಾಕೋಬ 5:13).

ಆರಾಧನೆಯಲ್ಲಿ ಹಾಡುವದನ್ನು ಕುರಿತು ನಾವು ತಿಳಿಯಬೇಕಾದ ಅಗತ್ಯ ಯಾವುದೆಂಬುದನ್ನು ಎರಡು ವಾಕ್ಯಗಳು ಸಾರಾಂಶವಾಗಿ ಹೇಳುತ್ತವೆ. ಅವು ಎಫೆಸ 5:19 ಮತ್ತು ಕೊಲೊಸ್ಸೆ 3:16. ಎರಡೂ ವಚನಗಳೂ ಒಂದೇಯಾಗಿ ತೋರುತ್ತವೆ:

> ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಇರ್ರಿ (ಎಫೆಸ 5:19).
>
> ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿ ಹೇಳಿ ಕೊಳ್ಳಿರಿ. ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ (ಕೊಲೊಸ್ಸೆ 3:16).

ಈ ವಚನಗಳು ಪ್ರತಿಯೊಬ್ಬರೂ ಹಾಡಬೇಕೆಂದು ದೇವರು ಬಯಸುತ್ತಾನೆಂದು ಬೋಧಿಸುತ್ತವೆ. ಹಾಡಬೇಕೆಂಬ ಆಜ್ಞೆಯು ಆಯ್ದ ಕೆಲವರಿಗೆ ಮಾತ್ರ ಹೇಳಲ್ಪಟ್ಟಿಲ್ಲ. ಸುಂದರವಾದ ಸ್ವರವುಳ್ಳವರಿಗೆ ಮಾತ್ರ ನೀಮಿತವಾಗಿಲ್ಲ. ಇಡೀ ಸಭೆಗೆ ಆದೇಶಗಳು ಸಂಬೋಧಿಸಲ್ಪಟ್ಟಿವೆ. ಯಾರಾದರೂ ಕುಳಿತುಕೊಂಡು ಕೇಳಬೇಕೆಂದು ದೇವರು ಬಯಸುವದಿಲ್ಲ; ಪ್ರತಿಯೊಬ್ಬರೂ ಹಾಡಬೇಕೆಂದು ಆತನು ಬಯಸುತ್ತಾನೆ.[4] ಒಬ್ಬ ವ್ಯಕ್ತಿಗೆ ಹಾಡುವ ವರ ಇರಬಹುದು ಇಲ್ಲವೇ ಇರದಿರಬಹುದು. ಆದರೆ (ಹಳೇ ಒಡಂಬಡಿಕೆಯ ಬರಹಗಾರನು ಹೇಳುವಂತೆ)

ಕರ್ತನಿಗೆ "ಉತ್ಸಾಹಧ್ವನಿ ಮಾಡೋಣ" (ಕೀರ್ತನೆ 95:1; KJV).[5]

ತನ್ನ ಜನರು ಆರಾಧನೆಯಲ್ಲಿ ಯಾವ ರೀತಿಯ ಹಾಡುಗಳನ್ನು ಉಪಯೋಗಿಸಬೇಕೆಂದು ಬಯಸುತ್ತಾನೆಂದು ಈ ವಚನಗಳು ಹೇಳುತ್ತವೆ: "ಕೀರ್ತನೆಗಳು, ಸಂಗೀತಗಳು, ಆತ್ಮ ಸಂಬಂಧವಾದ ಹಾಡುಗಳು." ಮೂರು ತರಗತಿಗಳಲ್ಲಿ ಭಿನ್ನತೆ ಮಾಡುವುದು ಕಠಿಣವಾದದ್ದು.[6] ಆದರೆ ಮುಖ್ಯ ಪದವು "ಆತ್ಮ ಸಂಬಂಧವಾದದ್ದು" ಎಂಬುದು. ಆರಾಧನೆಯಲ್ಲಿ ಉಪಯೋಗಿಸುವ ಹಾಡುಗಳು ಆತ್ಮಕ್ಕೆ ಆಕರ್ಷಿಸುವಂಥವುಗಳಾಗಿರಬೇಕು ಆದರೆ ದೇಹಕ್ಕಲ್ಲ.[7]

ಮೇಲಿನ ಎರಡು ವಚನಗಳು ನಮ್ಮ ಹಾಡುಗಳಿಗೆ ಗುರಿಯಿರಬೇಕೆಂದು ಸೂಚಿಸುತ್ತವೆ. ಕೆಲವು ಸಲ, ಅವು ಹೊರಗೆ ತೋರಿಸುತ್ತವೆ: "ಒಬ್ಬರಿಗೊಬ್ಬರು ಮಾತಾಡುವುದು"; "ಒಬ್ಬರಿಗೊಬ್ಬರು ಉಪದೇಶಮಾಡಿ ಬುದ್ಧಿ ಹೇಳಿಕೊಳ್ಳುವುದು." ಇತರ ಸಮಯಗಳಲ್ಲಿ, ಅವು ಮೇಲಿನ ದಿಕ್ಕಿಗೆ ತೋರಿಸುತ್ತವೆ: "ನಿಮ್ಮ ಹೃದಯದಲ್ಲಿ ಕರ್ತನಿಗೆ ಗಾನ ಮಾಡುವುದು"; "ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡುವುದು."

ಅನೇಕ ಹಾಡುಗಳು ಜೊತೆ ಕ್ರೈಸ್ತರಿಗೆ ಇಲ್ಲವೇ ಕ್ರಿಸ್ತನನ್ನು ಸ್ವೀಕರಿಸುವ ಅಗತ್ಯತೆಯುಳ್ಳವರಿಗೆ ಪ್ರಬೋಧಿಸುವ ಹಾಡುಗಳಾಗಿವೆ:

> ಯೇಸು ಸ್ವಾಮಿ, ನಿಂಗೆ ನಾನು
> ಎಲ್ಲವನ್ನೂ ಕೊಡ್ವೆನು,
> ನಿನ್ನ ಮುಂದೆ ನಾನು ಬಿದ್ದು
> ನಿನ್ನಾರಾಧಿಸುವೆನು.[8]
>
> ಮುಂದೆ ಸಾಗಿರೀಗ
> ಕ್ರೈಸ್ತ ಬಂಟರೇ
> ಹೊಂದಿಕೊಂಡು ಕ್ರೂಜೆ
> ಶಿಸ್ತಿನಿಂದಲೇ; ...[9]
>
> ಯುದ್ಧ ಸನ್ನದ್ಧರಾಗಿ
> ಕ್ರಿಸ್ತನ ಭಟರೇ!
> ಆತನ ಧ್ವಜವೆತ್ತಿ
> ಹೋರಾಡಿ ವೀರರೇ!; ...[10]

ಇತರ ಹಾಡುಗಳು ದೇವರ ಕಡೆಗೆ, ಯೇಸುವಿನ ಕಡೆಗೆ ಇರುವ ಸ್ತೋತ್ರದ ಮತ್ತು ಕೃತಜ್ಞತಾ ಸ್ತುತಿಯ ಹಾಡುಗಳಾಗಿವೆ.

> ಆನಂದವೇ! ಆನಂದವೇ!
> ನಾ ಕ್ರಿಸ್ತನ ಭಕ್ತನಾದನು,
>
> ಸಂಭ್ರಮ ಪಡು, ಮನವೇ!
> ನಾ ಭಾಗ್ಯವಂತನಾದೆನು.[11]
>
> ನೀ ಬೇಕು ಸರ್ವದಾ,
> ಉದ್ಧಾರಕ!!
> ಇನ್ಯಾರು ಕೊಡೋರು ಸುಶಾಂತಿಯ?[12]

ಎನ್ ಎನ್ ಪಾಪನೀಗ್ವು?
ಯೇಸುವಿನ ರಕ್ತಮಾತ್ರ;
ಏನು ಸ್ವಸ್ಥ ಕೊಡ್ವದು?
ಯೇಸುವಿನ ರಕ್ತಮಾತ್ರ.[13]

ಅಂತಿಮವಾಗಿ, ಈ ವಚನಗಳು ಕ್ರೈಸ್ತರು ಕೇವಲ ತುಟಿಗಳಿಂದ ಮಾತ್ರ ಹಾಡಬಾರದು, ಅವರು ತಮ್ಮ ಹೃದಯಗಳಲ್ಲಿ "ಕರ್ತನಿಗೆ ಗಾನ ಮಾಡಬೇಕು," "ದೇವರಿಗೆ ತಮ್ಮ ಹೃದಯಗಳಲ್ಲಿ ಕೃತಜ್ಞತೆಯಿಂದ ಗಾನ ಮಾಡಬೇಕು" ಎಂದು ಒತ್ತಿ ಹೇಳುತ್ತವೆ. ಆರಾಧಕರು ತಾವು ಹಾಡುತ್ತಿರುವ ಶಬ್ದಗಳ ಬಗ್ಗೆ ಯೋಚಿಸುವ ಅಗತ್ಯತೆಯಿದೆ. ಅವರು "ಆತ್ಮದಿಂದಲೂ ಹಾಡಬೇಕು, ಬುದ್ಧಿಯಿಂದಲೂ ಹಾಡ ಬೇಕು" (1 ಕೊರಿಂಥ 14:15). ಹೃದಯದಿಂದ ಬಾರದೇ ಇರುವ ಹಾಡುವಿಕೆಯು ಮೇಲ್ಛಾವಣೆಯಿಂದ ಮೇಲಕ್ಕೆ ಹೋಗುವದಿಲ್ಲ.

## ದೇವರು ಏನನ್ನು ಬಯಸುವದಿಲ್ಲ

ನಾವು ಅಧ್ಯಯನ ಮಾಡಿದ ವಚನಗಳಲ್ಲಿ ನಮೂದಿಸಿದ "ವಾದ್ಯಗಳು" ಮಾನ ವನ ಧ್ವನಿ ಮತ್ತು ಹೃದಯ ಎಂದು ಗಮನಿಸಿದ್ದೇವೆ. ಸಂಗೀತದ ಯಾಂತ್ರಿಕ ವಾದ್ಯ ಗಳ ಬಗ್ಗೆ ಉಲ್ಲೇಖವಿಲ್ಲ.[14] ಹೊಸ ಒಡಂಬಡಿಕೆಯನ್ನು ಓದಿರಿ, ಕರ್ತನ ಸಭೆಯ ಆರಾಧನೆಯಲ್ಲಿ ವಾದ್ಯಗಳು ಉಪಯೋಗಿಸಲಪ್ಪಟ್ಟಿರುವ ಯಾವುದೇ ಉಲ್ಲೇಖವಿಲ್ಲ.[15] ಹಳೇ ಒಡಂಬಡಿಕೆಯ ಆರಾಧನೆಯಲ್ಲಿ ಸಂಗೀತದ ತಂತೀ ವಾದ್ಯಗಳೂ ಇತರ ವಾದ್ಯಗಳೂ (ಉದಾಹರಣೆ: ಕೀರ್ತನೆ 150) ಉಪಯೋಗಿಸಲ್ಪಟ್ಟಿವೆ. ಆದರೆ ಹೊಸ ಒಡಂಬಡಿಕೆಯ ಕ್ರೈಸ್ತ ಅರಾಧನೆಯಲ್ಲಿ ಅವು ಇರುವದಿಲ್ಲ.[16]

ನಾವು ತಿಳಿದ ಮಟ್ಟಿಗೆ "ನೀವು ಆರಾಧನೆಯಲ್ಲಿ ಸಂಗೀತ ವಾದ್ಯಗಳನ್ನು ಉಪಯೋಗಿಸಬಾರದು" ಎಂದು ಆದಿ ಕ್ರೈಸ್ತರಿಗೆ ಎಂದೂ ಹೇಳಲ್ಪಟ್ಟಿರುವದಿಲ್ಲ. ಹಾಗಾದರೆ ಕ್ರೈಸ್ತ ಆರಾಧನೆಯಲ್ಲಿ ವಾದ್ಯಗಳು ಯಾಕೆ ಉಪಯೋಗಿಸಲ್ಪಟ್ಟಿರುವದಿಲ್ಲ? ಕರ್ತನ ಮೇಜಿನ ಮೇಲೆ ಹ್ಯಾಂಬರ್ಗರ ಮತ್ತು ಕೊಕೊ ಕೋಲಾ ಕಂಡು ಬರುವದಿಲ್ಲ ಎಂಬ ತಳಹದಿಯ ಮೇಲೆ ಈ ತೀರ್ಮಾನವನ್ನು ಮಾಡಬಹುದು: ದೇವರು ತಾನು ಏನು ಬಯಸುವನೆಂದು ನಮಗೆ ಸ್ಪಷ್ಟವಾಗಿ ಹೇಳುವಾಗ, ಅದೇ ತರಗತಿಯಲ್ಲಿರುವ ಬೇರೆ ಪ್ರತಿಯೊಂದನ್ನು ತೆಗೆದು ಹಾಕುತ್ತದೆ.


ಇದು ಕೆಲವು ಸಲ "ವಿನಾಯಿಸುವ ಸೂತ್ರ" ಎಂದು ಕರೆಯಲ್ಪಡುತ್ತದೆ. "ವಿನಾಯಿಸುವ ಸೂತ್ರ" ಎಂಬ ಹೇಳಿಕೆಯನ್ನು ನೀವೆಂದೂ ಕೇಳದೇ ಇರಬಹುದು. ಆದರೆ ಈ ಸೂತ್ರವನ್ನು ನೀವು ಪ್ರತಿದಿನವೂ ಉಪಯೋಗಿಸುತ್ತಿರಿ: ಗೋಡೆಗೆ ಬಿಳಿಬಣ್ಣ ಹಚ್ಚಲು ಒಬ್ಬನನ್ನು ನೇಮಿಸುತ್ತೀರಿ. ಅವನಿಗೆ "ಕೆಂಪು ಬಣ್ಣ ... ಇಲ್ಲವೇ ನೀಲಿಬಣ್ಣ ... ಇಲ್ಲವೇ ಹಸಿರು ಬಣ್ಣ ... ಅಥವಾ ಕರಿ ಬಣ್ಣ ಹಚ್ಚಬೇಡ" ಎಂದು ಹೇಳುವ ಅವಶ್ಯಕತೆಯಿರುವದಿಲ್ಲ. "ಬಿಳಿ ಬಣ್ಣ ಹಚ್ಚು" ಎಂದು ನೀವು ಬಯಸುವಂಥದ್ದು ಸ್ಪಷ್ಟವಾಗಿ ಹೇಳಲ್ಪಟ್ಟಾಗ, ಅದು ಸಹಜವಾಗಿ ಬೇರೆ ಬಣ್ಣವನ್ನು ಹಚ್ಚುವದನ್ನು ವಿನಾಯಿಸುತ್ತದೆ.

ವಿನಾಯಿಸುವ ಸೂತ್ರದ ಉದಾಹರಣೆಗಳು ಬೈಬಲಿನಲ್ಲಿ ಬಹಳ ಇವೆ. ನೋಹನು ಒಂದು ನಾವೆಕಟ್ಟಲು ಹೇಳಲ್ಪಟ್ಟನು (ಆದಿಕಾಂಡ 6:14). "ಮರದಿಂದ ಅದನ್ನು ಕಟ್ಟು"


ಎಂದು ಅವನಿಗೆ ಹೇಳಲ್ಪಟ್ಟಿತು. ಅವನು ಯಾವುದೇ ಮರವನ್ನು ಉಪಯೋಗಿಸ ಬಹುದು: ಓಕ್ ಮರ, ದೇವದಾರು ಮರ, ತುರಾಯಿ ಮರ ಇಲ್ಲವೇ ತನಗೆ ಬೇಕಾದ ಯಾವುದೇ ಮರದಿಂದ ಕಟ್ಟಬಹುದು.





ಆದರೆ ದೇವರು ತನ್ನ ಉಪದೇಶದಲ್ಲಿ ಸ್ಪಷ್ಟಪಡಿಸಿದರು. ಅದನ್ನು ತುರಾಯಿ ಮರದಿಂದ ಕಟ್ಟಬೇಕೆಂದು ನೋಹನಿಗೆ ಹೇಳಿದನು (ಆದಿಕಾಂಡ 6:14)[17] "ಓಕ್ ಮರದಿಂದ, ... ಇಲ್ಲವೇ ದೇವದಾರು ಮರದಿಂದ, ... ಇಲ್ಲವೇ ಬೇರೆ ಯಾವುದೇ ಮರದಿಂದ ಕಟ್ಟ ಬೇಡ" ಎಂದು ಕರ್ತನು ಹೇಳಬೇಕಾಗಿದ್ದಿಲ್ಲ. ತುರಾಯಿ ಮರವನ್ನು ಕುರಿತು ಸ್ಪಷ್ಟವಾಗಿ ಹೇಳಿದಾಗ ಬೇರೆ ಎಲ್ಲಾ ಮರಗಳು ನಿಷೇಧಿಸಲ್ಪಟ್ಟಿವೆ.




ಇಸ್ರಾಯೇಲ್ಯರು ಐಗುಪ್ತದಿಂದ ತಪ್ಪಿಸಿಕೊಳ್ಳುವ ಮೊದಲು ಮರಣವು ಅವರ ಮನೆಯೊಳಗೆ ಬಾರದಂತೆ ತಮ್ಮ ಮನೆಬಾಗಿಲು ಪಟ್ಟಿಗಳಿಗೆ ರಕ್ತ ಹಚ್ಚಬೇಕೆಂದು ಹೇಳ ಲ್ಪಟ್ಟಿತು (ವಿಮೋಚನಕಾಂಡ 12:7, 13) "ಒಂದು ಪ್ರಾಣಿಯ ರಕ್ತ ಉಪಯೋಗಿ ಸಿರಿ" ಎಂದು ದೇವರು ಹೇಳಿದ್ದರೆ. ಆಕಳು, ಆಡು, ಕುರಿಮರಿ ಇಲ್ಲವೇ ಯಾವುದೇ ಪ್ರಾಣಿಯನ್ನು ಕೊಯ್ಯಲು ಆಯ್ದುಕೊಳ್ಳುತ್ತಿದ್ದರು. ಆದರೆ ದೇವರು ಕುರುಮರಿಯ ರಕ್ತವನ್ನು ಉಪಯೋಗಿಸಲು ಪ್ರತ್ಯೇಕವಾಗಿ ಅವರಿಗೆ ಹೇಳಿದ್ದನು (ವಿಮೋಚನಕಾಂಡ 12:3, 7). "ಬಾಗಿಲಿನ ನಿಲುವು ಪಟ್ಟಿಗೆ ಆಕಳಿನ, ಆಡಿನ ಇಲ್ಲವೇ ಯಾವುದೇ ಬೇರೆ ಪ್ರಾಣಿಯ ರಕ್ತವನ್ನು ಹಚ್ಚ ಬೇಡಿರಿ" ಎಂದು ದೇವರು ಹೇಳಲಿಲ್ಲ. "ಕುರಿಮರಿ" ಎಂದು ಆತನು ಹೇಳಿದಾಗ ಬೇರೆ ಇತರ ಜಾತಿಯ ಪ್ರಾಣಿಗಳು ನಿಷೇಧಿಸಲ್ಪಟ್ಟಿವೆ.





ನಾವು ಬಾಪ್ತಿಸ್ಮ ಹೊಂದಬೇಕೆಂದು ದೇವರು ಆಜ್ಞಾಪಿಸಿದ್ದಾನೆ (ಅಪೊಸ್ತಲರ ಕೃತ್ಯ 2:38). ಈ ಆಜ್ಞೆಯನ್ನು ಕುರಿತು "ಬಾಪ್ತಿಸ್ಮ ಹೊಂದುವವನ ಮೇಲೆ ನೀರು ಹಚ್ಚಿರಿ" ಎಂದು ಕರ್ತನು ಹೇಳಿದ್ದರೆ, ನಮ್ಮ ಕಲ್ಪನೆಯು ಕಲ್ಪಿಸಿದ ಯಾವುದೇ ರೀತಿಯಲ್ಲಿ ನೀರು ಹಚ್ಚ ಬಹುದಿತ್ತು. ಜನರ ಮೇಲೆ ನಾವು ನೀರು ಚಿಮುಕಿಸಬಹುದಿತ್ತು; ಜನರ ಮೇಲೆ ನೀರು ಸುರಿಯ ಬಹುದಿತ್ತು; ಜನರನ್ನು ನೀರಿನಲ್ಲಿ ಮುಳುಗಿಸಿ ಎಳಿಸಬಹುದಿತ್ತು. ಆದರೆ ನಾವು ನೋಡಿದಂತೆ ಪರಿಶುದ್ಧ ಬರಹದ ಬಾಪ್ತಿಸ್ಮವು ಮುಳುಗಿಸಿ ಎಳಿಸುವುದು. "ನೀವು ನೀರನ್ನು ಚಿಮುಕಿಸ ಬೇಡಿರಿ ಇಲ್ಲವೇ ಸುರಿಯ ಬೇಡಿರಿ, ಅವನ್ನು ಬಾಪ್ತಿಸ್ಮ ಎಂದು ಕರೆಯಬೇಡಿರಿ" ಎಂದು ಹೊಸ ಒಡಂಬಡಿಕೆ ಹೇಳಬೇಕಾಗಿಲ್ಲ. ಮುಳುಗಿಸಿ ಎಳುಸುವಿಕೆಯು ಸ್ಪಷ್ಟವಾಗಿ ಹೇಳಲ್ಪಟ್ಟಿರುವಾಗ ಚಿಮುಕಿಸುವದನ್ನು, ಸುರಿಯುವದನ್ನು ಹೊರಗಿಡುತ್ತದೆ.




ಯೇಸುವು ಕರ್ತನ ಭೋಜನವನ್ನು ಸ್ಥಾಪಿಸಿದಾಗ, "ನನ್ನ ದೇಹವನ್ನು ಪ್ರತಿನಿಧಿಸಲು ಸಾಮಾನ್ಯ ಊಟ ಉಪಯೋಗಿಸಿರಿ ಹಾಗೂ ನನ್ನ ರಕ್ತ ಪ್ರತಿನಿಧಿಸಲು ಸಾಮಾನ್ಯ ಪಾನೀಯ ಉಪಯೋಗಿಸಿರಿ" ಎಂದು ಹೇಳಿದ್ದರೆ, ಯಾವುದೇ ಆಹಾರ ಮತ್ತು ಪಾನೀಯ ಉಪಯೋಗಿಸಲು ಸಭೆಯು ಸ್ವತಂತ್ರವಾಗಿರುತ್ತಿತ್ತು. ಕೆಲವರು ಹ್ಯಾಂಬರ್ಗರ್ಸ ಮತ್ತು ಕೊಕೊ ಕೋಲಾ ಮೆಚ್ಚಿಕೊಳ್ಳಬಹುದು. ಇತರರು ಸಿಹಿರೊಟ್ಟಿ ಮತ್ತು ಹಾಲನ್ನು ಮೆಚ್ಚಿಕೊಳ್ಳಬಹುದು. ಆದರೆ ನಾವು ನೋಡಿದ ಹಾಗೆ ಯೇಸುವೂ ಆದಿ ಕ್ರೈಸ್ತರೂ ಉಪಯೋಗಿಸಿದ ವಸ್ತುಗಳು ಹುಳಿಯಿಲ್ಲದ ರೊಟ್ಟಿ ಮತ್ತು ದ್ರಾಕ್ಷಾರಸಗಳು. ಕರ್ತನನ್ನು ಮೆಚ್ಚಿಸಲು ಬಯಸುವವರಿಗೆ "ಹ್ಯಾಂಬರ್ಗರ್ಸ ಮತ್ತು ಕೊಕೊ ಕೋಲಾ ಉಪಯೋಗಿಸಬೇಡಿರಿ" "ಸಿಹಿರೊಟ್ಟಿ ಮತ್ತು ಹಾಲು ಉಪಯಗಿಸಬೇಡಿರಿ"ಎಂದು

ಹೇಳಬೇಕಾಗಿಲ್ಲ. ಅವರು ದೇವರ ಪ್ರತಿಷ್ಠಿಸಿದ್ದರೊಂದಿಗೆ ತೃಪ್ತರಾಗಿರ ಬೇಕಾಗಿದೆ.





ಹುಳಿಯಿಲ್ಲದ ರೊಟ್ಟಿ ಮತ್ತು ದ್ರಾಕ್ಷಾರಸಕ್ಕೆ ಪ್ರತಿಯಾಗಿ ಹ್ಯಾಂಬರ್ಗರ್ಸ್ ಮತ್ತು ಕೋಕ್ ಉಪಯೋಗಿಸುವುದು ತಪ್ಪಾಗಿರುವದೆಂದು ನೋಡುತ್ತೀರಲ್ಲವೇ? ಕರ್ತನ ಮೇಜಿಗೆ ಹ್ಯಾಂಬರ್ಗರ್ಸ್ ಹಾಗೂ ಕೋಕ್ ಕೂಡಿಸುವುದು ತಪ್ಪೆಂದು ನೋಡುತ್ತೀ ರಲ್ಲವೇ?[18] ನನ್ನ ಅನುಭವದಲ್ಲಿ ಕರ್ತನ ಭೋಜನಕ್ಕೆ ಹ್ಯಾಂಬರ್ಗರ್ಸ ಮತ್ತು ಕೋಕ್ ಕೂಡಿಸುವುದು ದೇವದೂಷಣೆ ಅಲ್ಲವೆಂದು ಒಬ್ಬ ವ್ಯಕ್ತಿಯು ನೋಡದಿದ್ದರೆ, ಅವರು ಹಾಡುವದಕ್ಕೆ ಸಂಗೀತವನ್ನು ಕೂಡಿಸುವುದು ತೊಂದರೆ ದಾಯಕವಾದದ್ದೆಂದು ಎಂದೂ ನೋಡುವುದಿಲ್ಲ.

ಆರಾಧನೆಯಲ್ಲಿ ಹಾಡುವದರ ವಿಷಯಕ್ಕೆ ವಿನಾಯಿಸುವ ಸೂತ್ರವು ಹೇಗೆ ಅನ್ವಯಿಸುವುದು ಎಂಬುದನ್ನು ನೀವು ಬಹುಶಃ ನಿರೀಕ್ಷಿಸಿರಬಹುದು, “ನೀವು ಆರಾಧಿಸು ವಾಗ ಸಂಗೀತ ಮಾಡಿರಿ” ಎಂದು ದೇವರು ಹೇಳಿದ್ದಾರೆ. ಸಭೆಯು ಹಾಡ ಬಹುದಿತ್ತು, ವಾದ್ಯಗಳನ್ನು ಬಾರಿಸಬಹುದಿತ್ತು ಇಲ್ಲವೇ ಎರಡನ್ನೂ ಒಂದುಗೂಡಿಸಬಹುದಿತ್ತು, ಆದರೆ ದೇವರು ತನಗೆ ಏನು ಬೇಕೆಂಬುದನ್ನು ಸ್ಪಷ್ಟೀಕರಿಸಿದ್ದಾನೆ. ಆತನು ಹೀಗೆ ಹೇಳಿದ್ದಾನೆ:

> ... ಹಾಡುವೆನು (ರೋಮಾಪುರ 15:9).
> ... ಹಾಡುವೆನು ... (1 ಕೊರಿಂಥ 14:15).
> ... ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ (ಎಫೆಸ 5:19).
> ... ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ (ಕೊಲೊಸ್ಸೆ 3:16).
> ... ಹಾಡುವೆನು ... (ಇಬ್ರಿಯ 2:12).
> ನಿಮ್ಮಲ್ಲಿ ಸಂತೋಷಪಡುವವನಿದ್ದಾನೋ? ಅವನು ಕೀರ್ತನೆ ಹಾಡಲಿ (ಯಾಕೋಬ 5:13).

“ಕ್ರೈಸ್ತ ಆರಾಧನೆಯಲ್ಲಿ ಸಂಗೀತದ ಯಾಂತ್ರಿಕ ವಾದ್ಯಗಳನ್ನು ಉಪಯೋಗಿಸ ಬೇಡಿರಿ” ಎಂದು ದೇವರು ಹೇಳಬೇಕಾಗಿರುವದಿಲ್ಲ. ಹಾಡುವದನ್ನು ಆತನು ಸ್ಪಷ್ಟ ಪಡಿಸಿದಾಗ, ಎಲ್ಲಾ ತರದ ಸಂಗೀತ ವಿಧಾನವನ್ನು ನಿಷೇಧಿಸಿದ್ದಾನೆ.




ಆದಿ ಕ್ರೈಸ್ತರು ಪ್ರತಿಬಂಧಿಸುವ ಸೂತ್ರವನ್ನು ಸ್ಪಷ್ಟವಾಗಿ ತಿಳಿದು ಕೊಂಡಿದ್ದರು - ಯಾಕಂದರೆ ಅವರು ಹಳೇ ಒಡಂಬಡಿಕೆಯ ಆರಾಧನೆಯಲ್ಲಿ ಉಪಯೋಗಿಸಲ್ಪಟ್ಟ ವಾದ್ಯಗಳನ್ನು ತಮ್ಮ ಆರಾಧನೆಗಳಿಂದ ತೆಗೆದು ಹಾಕಿದರು. ನೂರಾರು ವರ್ಷಗಳ ನಂತರ ಕಥೋಲಿಕ್ ಸಭೆಯು ತನ್ನ ಆರಾಧನೆಯಲ್ಲಿ ಆರ್ಗನ್‌ನ್ನು ಪರಿಚಯಿಸುವವರೆಗೆ ಕ್ರೈಸ್ತ ಆರಾಧನೆಯು ಕಪೆಲ್ಲಾ[19] ಆಗಿತ್ತೆಂದು ಪಂಡಿತರು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ.[20]

## ಮುಕ್ತಾಯ

ಆರಾಧನೆಯಲ್ಲಿಯ ಎಲ್ಲಾ ಪ್ರಕಟಿಸುವಿಕೆಗಳಲ್ಲಿಯಂತೆ ಹಾಡುವದರಲ್ಲಿ ಸರಿಯಾದ ಕೃತ್ಯಗಳೂ ಸರಿಯಾದ ಮನೋಭಾವನೆಗಳೂ ಇರುವುದು ಸಭೆಗೆ ಅಗತ್ಯವಾಗಿದೆ. ದೇವರು ಆಜ್ಞಾಪಿಸಿದ್ದನ್ನು ಮಾಡುವದರಲ್ಲಿ ಸದಸ್ಯರು ಮೊದಲು ಆಸಕ್ತಿಯುಳ್ಳವರಾಗಿರಬೇಕು. ದೇವರಿಗೆ ಮೆಚ್ಚಿಗೆ ಯಾದ ರೀತಿಯಲ್ಲಿ ತಮ್ಮ ಹೃದಯಗಳನ್ನು ಆತನನ್ನು ಆರಾಧಿಸಲು ಇಟ್ಟುಕೊಳ್ಳಬೇಕು (ಎಫೆಸ 5:10). ಆರಾಧನೆಯ ಈ ರೀತಿ ಇಲ್ಲವೇ ಆ ರೀತಿ ದೇವರಿಗೆ ಮೆಚ್ಚಿಗೆ ಯಾಗಬಹುದೆಂದು ನಾನು ಯೋಚಿಸಬಹುದು. ಆದರೆ ಆತನನ್ನು ಮೆಚ್ಚಿಸುವ ಒಂದೇ ಮಾರ್ಗವು ಯಾವುದು ಎಂಬುದನ್ನು ಆತನ ವಾಕ್ಯದಲ್ಲಿ ಆತನು ಪ್ರಕಟಿಸಿದ್ದನ್ನು ಓದುವದರಿಂದ ಮಾತ್ರವೇ ತಿಳಿದು ಕೊಳ್ಳುವೆನು.

ಅವರು ಹಾಡುತ್ತಿರುವಂತೆ ಕ್ರೈಸ್ತರ ಹೃದಯಗಳು ದೇವರನ್ನು ಸ್ತುತಿಸುವವದರ ಮೇಲೆ ಇಡಲ್ಪಡಬೇಕು (ಅಪೊಸ್ತಲರ ಕೃತ್ಯ 2:47; ರೋಮಾಪುರ 14:11; 15:11; ಫಿಲಿಪ್ಪಿ 1:11; ಇಬ್ರಿಯ 13:15).

"(ತಮ್ಮ) ಹೃದಯಗಳಲ್ಲಿ ದೇವರಿಗೆ ಕೃತಜ್ಞತಾ ಸ್ತುತಿಯೊಂದಿಗೆ" ಅವರು ಹಾಡತಕ್ಕದ್ದು (ಕೊಲೊಸ್ಸೆ 3:16). ಅವರು "ಆತ್ಮದಿಂದ ಹಾಡಬೇಕು ... ಬುದ್ಧಿಯಿಂದಲೂ ಹಾಡಬೇಕು" (1 ಕೊರಿಂಥ 14:15;).

"ಏನು" ಮತ್ತು "ಹೇಗೆ" ಎಂಬ ಎರಡರೊಂದಿಗೆ ಸಂಬಂಧಿಸಿ, ನಿಜವಾದ ಆರಾಧಿಕರು "ಆತ್ಮದಲ್ಲಿಯೂ ಸತ್ಯದಲ್ಲಿಯೂ" (ಯೋಹಾನ 4:24) ದೇವರನ್ನು ಆರಾಧಿಸ ಬೇಕು.

ಟಿಪ್ಪಣಿಗಳು

[1]ಬರಹಗಾರನು ಹಳೇ ಒಡಂಬಡಿಕೆಯ ವಾಕ್ಯವನ್ನು, ಕೀರ್ತನೆ 22:22ನ್ನು ಉಲ್ಲೇಖಿಸುತ್ತಿದ್ದನು. [2]ಮತ್ತಾಯ 26:30 ನೋಡಿರಿ. [3]ಪಟ್ಟಿಯು ಇಬ್ರಿಯ 13:15ರಂಥ ಸ್ತುತಿಗಳಿಂದ ದೇವರನ್ನು ಕೊಂಡಾಡುವ ವಚನಗಳನ್ನು ಒಳಗೊಂಡಿರಬಹುದು. ಸಂದರ್ಭಗಳ ಹಿನ್ನೆಲೆಯಲ್ಲಿ ಈ ಎಲ್ಲಾ ವಾಕ್ಯಗಳನ್ನು ಓದಿರಿ. [4]ಯಾರಿಗಾದರೂ ಹಾಡಲು ಅಸಾಧ್ಯವಾದಂಥ ಸಂದರ್ಭಗಳು ಬರಬಹುದು (he may have laryngitis), ಆದರೆ ಇವು ನಿಯಮಕ್ಕಿಂತಲೂ ಅಪವಾದಗಳಾಗಿರಬಹುದು. [5]ಕೀರ್ತನೆ 95:1 ಓದಿರಿ. ಮತ್ತು "ಉತ್ಸಾಹ ಧ್ವನಿ ಮಾಡಿರಿ" ಎಂಬುದು ಉತ್ಸಾಹದಿಂದ ಹಾಡುವದಕ್ಕೆ ಸಂಬಂಧಿಸಿರುವದನ್ನು ನೋಡುವಿರಿ. [6]"ಕೀರ್ತನೆಗಳು" ಸ್ತೋತ್ರದ ಹಾಡುಗಳು, "ಸಂಗೀತಗಳು," ಗಂಭೀರವಾದ ಹಾಡುಗಳು ಮತ್ತು "ಆತ್ಮ ಸಂಬಂಧವಾದ ಹಾಡುಗಳು" ಹೆಚ್ಚು ಆಸಕ್ತಿಯುಳ್ಳವುಗಳೂ ಎಂದು ಕೆಲವರು ಯೋಚಿಸುತ್ತಾರೆ. ಮೂರರಲ್ಲಿ ನಾವು ಹೆಚ್ಚು ಭಿನ್ನತೆಗಳನ್ನು ಮಾಡಬಾರದು. ಇವು ಹಾಡುವಲ್ಲಿ ಆರಾಧಿಸುವ ಒಂದೇ ತತ್ವದ ಕಡೆಗೆ ನೋಡುವ ಮೂರು ವಿಧಾನಗಳಾಗಿವೆ. [7]ಒಂದು ಹಾಡು ಆತ್ಮವನ್ನು ಆಕರ್ಷಿಸುವುದೋ ಇಲ್ಲವೇ ದೇಹವನ್ನು ಆಕರ್ಷಿಸುವುದೋ ಅದು ತೀರ್ಮಾನದ ವಿಷಯವಾಗಿರುವುದು. ಆದರೆ ದೇವರು ತನ್ನ ಜನರು ಆತ್ಮಿಕ ಹಾಡುಗಳನ್ನು ಹಾಡಬೇಕೆಂದು ಬಯಸುತ್ತಾನೆ ಎಂಬುದು ಮೂಲ ತತ್ವವಾಗಿದೆ. [8]"ಯೇಸು ಸ್ವಾಮೀ, ನಿಂಗೆ ನಾನು ಎಲ್ಲವನ್ನೂ ಕೊಡ್ವೆನು" ಎಂಬ ಹಾಡನ್ನು ನೋಡಿರಿ. [9]"ಮುಂದೆ ಸಾಗಿರೀಗ ಕ್ರೈಸ್ತ ಬಂಟರೇ" ಎಂಬ ಹಾಡನ್ನು ನೋಡಿರಿ. [10]George Duffield, "Stand Up, Stand Up for Jesus," *Songs of Faith and Praise*, ed. Alton H. Howard (West Monroe, La.: Howard Publishing Co., 1994).

[11]"ಆನಂದವೇ! ಆನಂದವೇ!" ಎಂಬ ಹಾಡನ್ನು ನೋಡಿರಿ. [12]"ನಾ ಸಮಸ್ತವ, ನಾ ಸಮಸ್ತವ" ಎಂಬ ಹಾಡನ್ನು ನೋಡಿರಿ. [13]"ಎನ್ ಎನ್ ಪಾಪನೀಗ್ಸು? ಯೇಸುವಿನ ರಕ್ತಮಾತ್ರ" ಎಂಬ ಹಾಡನ್ನು ನೋಡಿರಿ. [14]"ಸಂಗೀತದ ಯಾಂತ್ರಿಕವಾದ ವಾದ್ಯಗಳು" ಎಂಬುದು ಉದ್ದವಾದದ್ದೂ ನಯವಿಲ್ಲದ್ದೂ ಆಗಿದೆ. ಸಮಯವನ್ನೂ ಸ್ಥಳವನ್ನು ಉಳಿಸಲು ಈ ಪಾಠದ ಈ ಹಂತದಿಂದ "ವಾದ್ಯಗಳು" ಎಂದು ನಾನು ಹೇಳುವಲ್ಲೆಲ್ಲಾ "ಸಂಗೀತದ ಯಾಂತ್ರಿಕ ವಾದ್ಯಗಳು" ಎಂಬ ಅರ್ಥವಿರುವುದು. [15]ಹೊಸ ಒಡಂಬಡಿಕೆಯಲ್ಲಿ ಆಗಾಗ ಯಾಂತ್ರಿಕ ವಾದ್ಯಗಳು ನಮೂದಿಸಲ್ಪಟ್ಟಿರುವದನ್ನು ಕಂಡುಕೊಳ್ಳುವಿರಿ. ಆದರೆ ಕ್ರೈಸ್ತ ಆರಾಧನೆಯ ಸಂಬಂಧದಲ್ಲಿ ಅಲ್ಲ, ವಾದ್ಯಗಳು ಉದಾಹರಣೆಗಳಲ್ಲಿ ನಮೂದಿಸಲ್ಪಟ್ಟಿವೆ (1 ಕೊರಿಂಥ 13:1 ರಲ್ಲಿಯಂತೆ). ಹಾಗೂ ಪ್ರಕಟಣೆಯ ಸಂಕೇತದ ಭಾಗವಾಗಿರುವುದು (ಪ್ರಕಟನೆ 5:8ರಲ್ಲಿಯ ಧೂಪ ನುಡುವಿಕೆಯೊಂದಿಗೆ). ಕರ್ತನ ಸಭೆಯ ಆರಾಧನೆಯಲ್ಲಿ ಯಾಂತ್ರಿಕ ವಾದ್ಯಗಳು ನಮೂದಿಸಲ್ಪಟ್ಟಿರುವದಿಲ್ಲ. [16]ಪಂಡಿತರು ಸಾಮಾನ್ಯವಾಗಿ ಇದನ್ನು ಒಪ್ಪಿಕೊಳ್ಳುತ್ತಾರೆ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ ಕ್ರೈಸ್ತರು ಆರಾಧನೆಯಲ್ಲಿ ವಾದ್ಯಗಳ ಸಂಗೀತಕ್ಕೆ ವಿರೋಧವಾಗಿ ಬಲವಾಗಿ ಬರೆದರು. [17]"ತುರಾಯಿ ಮರ" ಯಾವುದೆಂದು ನಮಗೆ ತಿಳಿದಿರುವದಿಲ್ಲ. ಆದರೆ ಇದು ಪ್ರಾಮುಖ್ಯವಾದದ್ದಲ್ಲ. ದೇವರು ಯಾವ ಮರವನ್ನು ಬಯಸಿದನು ಎಂಬುದನ್ನು ನೋಹನು ತಿಳಿದದ್ದು ಮಹತ್ವದ್ದಾಗಿದೆ. [18]ದೇವರ ಪ್ರಕಟಣೆಗೆ ಹೆಚ್ಚು ಕೂಡಿಸುವ ಪಾಪವೂ ಬದಲಾಗಿಡುವ ಪಾಪವೂ ಅಷ್ಟೇ ಗಂಭೀರವಾದವುಗಳಾಗಿದೆ (ಪ್ರಕಟನೆ 22:18, 19 ನೋಡಿರಿ). [19]ಕಪೆಲ್ಲಾ ಅಂದರೆ ಅಕ್ಷರಶಃವಾಗಿ "ಚಾಪಲ್ ಪದ್ಧತಿ" ಎಂದರ್ಥ. ಕೇವಲ ಬಾಯ್ದೆರೆಯಾದ ಸಂದೇಶಕ್ಕೆ ಸಂಬಂಧಿಸಿ ಈ ಪದವು ಉಪಯೋಗಿಸಲ್ಪಟ್ಟಿದೆ. [20]600ರಲ್ಲಿ ಹಾಗೂ 700ರಲ್ಲಿ ವಾದ್ಯವನ್ನು ಪರಿಚಯಿಸುವ ವ್ಯರ್ಥವಾದ ಪ್ರಯತ್ನಗಳು ಮಾಡಲ್ಪಟ್ಟಿವೆ. ಆದರೆ ವಾದ್ಯವು ಕ್ರಿ. ಶ. 1250ರ ನಂತರದವರೆಗೆ ಉಳಿಯುವಂತೆ ಪರಿಚಯಿಸಲ್ಪಡಲಿಲ್ಲ.

© 2009 Truth for Today